# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128-2011** **ಪಿ . ಡಬ್ಲುಃ 4**

| | |
|---|---|
| ಸಾಕ್ಷಿದಾರರ ಹೆಸರು ವಾಸ್ತವ್ಯ | ಎಂ. ಕುಳ್ಳಪ್ಪ<br>ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 20-01-2023. |

**ಪಾಟೀ ಸವಾಲುಃ ಪ್ರತಿವಾದಿ-11 ಮತ್ತು 12 ರವರ ಪರ ಶ್ರೀ ಎಸ್.ವಿ ವಕೀಲರಿಂದಃ**

ಮೂರ್ತಿ ರವರು ಮರಪ್ಪನ ಮಕ್ಕಳಾದ ಸೋಮೇಶ ಮತ್ತು ಮಹೇಶ ರವರ ವಿರುದ್ಧ ದಾವೆಯನ್ನು ಸಲ್ಲಿಸಿದ್ದು. ಉಳಿದ ಯಾರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೂರ್ತಿ ಮತ್ತು ಮಹೇಶ ರವರಿಗೆ ಅವರ ಹೆಸರಿಗೆ ಖಾತೆ ಆಗದೇ ಇರುವುದರಿಂದ ಭಾಗ ಮಾಡಿ ಖಾತೆ ಮಾಡಿಕೊಡುವಂತೆ ದಾವಾ ಸಲ್ಲಿಸಿರುತ್ತಾರೆ. ಮೂರ್ತಿ ಮತ್ತು ಮಹೇಶ ರವರು ಅವರ ತಾತನ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದ, ಆದರೆ ಅವುಗಳ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ನಮ್ಮ ಜಮೀನಿನ ಪಕ್ಕ 1 ಐಟಂ ಜಮೀನು ಇರುತ್ತದೆ. ವಾದಿಗಳು ಎಷ್ಟು ಐಟಂ ಜಮೀನಿಗೆ ಸಂಬಂಧಿಸಿದಂತೆ ಈ ದಾವಾ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಜಮೀನುಗಳು ಮುದ್ದಹಳ್ಳಿ, ಕೆರೆಹುಂಡಿ, ಯಲಚಗೇರೆ ಮತ್ತು ಕಳಲೆಯಲ್ಲಿ ಇರುತ್ತವೆ.

2.ವಾದಿಗಳು ಮತ್ತು ಪ್ರತಿವಾದಿಗಳು ಬೇರೆ ಬೇರೆ ಮನೆಗಳಲ್ಲಿ ವಾಸವಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದ 5 ಮನೆ ಇದ್ದು, ಅವುಗಳ ಪೈಕಿ 3 ಮನೆ ಸರ್ಕಾರದಿಂದ ಮಂಜೂರಾಗಿದ್ದು, 2 ಮನೆ ಹಳೆಯ ಮನೆಗಳಾಗಿರುತ್ತವೆ. ಹಳೆ ಮನೆಯಲ್ಲಿ ನನಗೆ ಬುದ್ದಿ ಬಂದಾಗಿನಿಂದಲೂ ಒಂದೇ ಮನೆಯಲ್ಲಿ ಬೇರೆ ಬೇರೆ ಅಂಕಣಗಳಲ್ಲಿ ವಾಸವಿದ್ದರು, ಈಗ ಹೊಸ ಮನೆಗಳನ್ನು ಕಟ್ಟಿಕೊಂಡು ನಂತರ ಹೊಸ ಮನೆಗಳಿಗೆ ಹೋಗಿರುತ್ತಾರೆ. ನಾನು ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ . ನನ್ನ ಅಣ್ಣ ಚೇರ್ಮೆನ್ ಆಗಿದ್ದು, ನಾನು ಸಹ ಊರಿನಲ್ಲಿ ಯಜಮಾನಿಕೆಯನ್ನು ಮಾಡುತ್ತೇನೆ. ಮನೆಗಳು ಭಾಗವಾಗುವಾಗ ಕರೆದರೆ ನಾನು ಹೋಗುತ್ತೇನೆ.

3. 1 ನೇ ವಾದಿಯ ತಂದೆ ಹೆಸರು ಶಿವಪ್ಪ, 2 ನೇ ವಾದಿ ತಂದೆ ಹೆಸರು ಲಿಂಗಪ್ಪ ಮತ್ತು 11 ಮತ್ತು 12 ನೇ ಪ್ರತಿವಾದಿಯವರ ತಂದೆ ಹೆಸರು ಮರಪ್ಪ, ವಾದಿಯರ ತಂದೆಗೆ ಸಣ್ಣಮ್ಮ ಮತ್ತು ಮಿಣಕಮ್ಮ ಎಂಬ ಇಬ್ಬರು ಸಹೋದರಿಯರು ಇದ್ದಾರೆ. ಅವರುಗಳ ಪೈಕಿ ಮಿಣಕಮ್ಮನವರು ಮರಣ ಹೊಂದಿದ್ದು, ಸಣ್ಣಮ್ಮನವರು ಜೀವಂತ ಇರುತ್ತಾರೆ. ಮಿಣಕಮ್ಮನವರಿಗೆ ಶಿವಪ್ಪ ಮತ್ತು ಕೆಂಪರಾಜು ಎಂಬ ಇಬ್ಬರು ಮಕ್ಕಳು ಇರುತ್ತಾರೆ. ಅವರನ್ನು ಈ ದಾವೆಯ ಪಕ್ಷಕಾರರಾಗಿ ಮಾಡಿದ್ದಾರೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ವಾದಿಗಳು ಮತ್ತು ಪ್ರತಿವಾದಿ-11 ಮತ್ತ 12 ರವರ ತಂದೆಯರ ನಡುವೆ ಈಗಾಗಲೇ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರವರ ಭಾಗದ ಸ್ವತ್ತನ್ನು ಉಳುಮೆ ಮಾಡುತ್ತಾರೆ ಎಂದು ನುಡಿಯುತ್ತಾರೆ. 11 ಮತ್ತು 12 ನೇ ಪ್ರತಿವಾದಿ ತಂದೆಯವರು ತನ್ನ ಭಾಗಕ್ಕೆ ಬಂದ ಸ್ವತ್ತುಗಳನ್ನು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಮತ್ತು 11 ಮತ್ತು 12 ನೇ ಪ್ರತಿವಾದಿಗಳ ತಂದೆಯವರ ನಡುವೆ ಈಗಾಗಲೇ ವಿಭಾಗವಾಗಿದ್ದು, ವಿಭಾಗದ ಪ್ರಕಾರ ತಮ್ಮ ತಮ್ಮ ಭಾಗಕ್ಕೆ ಬಂದ ಸ್ವತ್ತುಗಳನ್ನು ಅನುಭವಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿಗಳ ಮತ್ತು ಪ್ರತಿವಾದಿಗಳ ಯಾವುದೇ ಪಂಚಾಯ್ತಿ ಮುಖಾಂತರ ವಿಭಾಗವಾಗಲಿ ಅಥವಾ ಯಾವುದೇ ರೀತಿ ವಿಭಾಗ ಆಗಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ನನಗೆ ಬಹಳ ಆತ್ಮಿಯರು ಎಂದರೆ ಸರಿಯಲ್ಲ. ವಾದಿಗಳ ಮತ್ತು ಪ್ರತಿವಾದಿಗಳ ಮನೆಯ ವ್ಯವಹಾರ ಗೊತ್ತಿಲ್ಲದಿದ್ದರೂ ಅವರ ನಡುವೆ ವಿಭಾಗ ಆಗಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪ್ರತಿವಾದಿ-14 ರವರ ಪರ ವಕೀಲರ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಹಾಗೂ ಪ್ರತಿವಾದಿ-15 ಮತ್ತು 16 ರವರ ಪರ ವಕೀಲರ ನ್ಯಾಯಾಲಯದಲ್ಲಿ ಗೈರುಹಾಜರಿದ್ದು, ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**